ಬಿಪಿಎಲ್ ಪಡಿತರ ಚೀಟಿಗೆ 1,30,683 ಅರ್ಜಿಗಳನ್ನು ಸ್ವೀಕರಿಸಿದ್ದು ಈ ಅರ್ಜಿಗಳು ಪರಿಶೀಲನಾ ಹಂತದಲ್ಲಿರುತ್ತದೆ.

ಈ) ಸರ್ಕಾರ ಪಡಿತರ ಚೀಟಿದಾರರಿಗೆ ರಿಯಾಯಿತಿ ದರದಲ್ಲಿ ಪಡಿತರ ಪದಾರ್ಥಗಳನ್ನು ವಿತರಣೆ ಮಾಡಲಾಗುತ್ತಿದ್ದು ನಿಗಧಿಗೊಳಿಸಲಾದ ದರಗಳು ಈ ಕೆಳಕಂಡಂತಿವೆ :–

ಪಡಿತರ ಚೀಟಿ	ಅಕ್ಕಿ		ಗೋಧಿ	
	ಪ್ರಮಾಣ ಕೆಜಿ	ದರ ಪ್ರತಿ ಕೆಜಿಗೆ ರೂ.	ಪ್ರಮಾಣ ಕೆಜಿ	ದರ ಪ್ರತಿ ಕೆಜಿಗೆ ರೂ.
ಎಎವೈ	28 ಕೆಜಿ	3.00	7	2.00
ಬಿಪಿಎಲ್	20 ಕೆಜಿ	3.00	5	3.00

1333 (1336) Sri Iwan Nigli (Nominee) - Will the Minister for Horticulture be pleased to state;

a) The number of acres of Coffee, Cardamom, Ginger and Pepper cultivation are in Karnataka ; (details be furnished) ;

b) The number of small growers in the state ;

c) whether the government is aware of prices of these highly inflated ; if so, the reason for the same; (details be furnished);

d) whether the government has any proposal to waive off the Interest amount of these small farmers who have taken Loan from the state owned co-operative banks and other banks ?

Sri Shasikanth Akkappa Naik (Horticulture Minister) -

a) Coffee, Cardamom, Ginger and Pepper are cultivated in a total area of 6.25 lakh acres in Karnataka Details are given below ;

Crop	Acres
Coffee	511200
Cardamom	50400
Ginger	34000
Pepper	30000
Total	6,25,600

b) The number of small growers in the state (who posses land upto 2 ha) nearly 51 lakhs.

c) Yes.

Coffee Prices have increased after a slump over last few years. As it is a storable produce and the product in the major

growing countries like Brazil is alternative, it affects the supply-demand and hence the prices fluctuate according to global production.

Cardamom, pepper and ginger: The prices of these crops are dependent on global supply and demand position, local weather conditions etc.

d) There is no proposal to waive off the interest amount of these small farmers in Co-operative Department.

1334 (1099) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯಾಶ್ರಯ ಯೋಜನೆ ಅನ್ವಯ ತುಮಕೂರು ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು ;

ಆ) ಬೆಳ್ಳಾವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಮಂಜೂರಾಗಿರುವ ಮನೆಗಳೆಷ್ಟು ; ಅರ್ಹ ಫಲಾನುಭವಿಗಳ ವಿವರ ನೀಡುವುದು ;

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) –

ಅ) ತುಮಕೂರು ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯು ನಿವೇಶನ ಹೊಂದಿದ ಅರ್ಹ ನಿರ್ವಸತಿ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳನ್ನು ಮನೆಗಳನ್ನು ನಿರ್ಮಿಸಿಕೊಳ್ಳಲು ಆರ್ಥಿಕ ಸಹಾಯ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಮತ್ಸ್ಯಾಶ್ರಯ 1ನೇ ಹಂತದ ಯೋಜನೆಯಡಿ ತುಮಕೂರು ಜಿಲ್ಲೆಗೆ ಮಂಜೂರಾದ 130 ಮನೆಗಳ ನಿರ್ಮಾಣ ಪೂರ್ಣಗೊಳಿಸಲಾಗಿದೆ. ಮತ್ಸ್ಯಾಶ್ರಯ 2ನೇ ಹಂತದ ಯೋಜನೆಯಡಿ ಸದರಿ ಜಿಲ್ಲೆಗೆ 260 ಮನೆಗಳು ಮಂಜೂರಾಗಿದ್ದು 227 ಮನೆಗಳು ಪೂರ್ಣಗೊಂಡಿದ್ದು ಉಳಿದ ಮನೆಗಳ ನಿರ್ಮಾಣವು ಪ್ರಗತಿಯಲ್ಲಿರುತ್ತವೆ.

ಆ) ಬೆಳ್ಳಾವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳು ಮಂಜೂರಾಗಿರುವುದಿಲ್ಲ.

1335 (1100) : ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?